**ಒ.ಎಸ್.ನಂ. 26/2014**
**DW-7**

(ಇಂದು ದಿನಾಂಕಃ 02-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ವಾಟೀ ಸವಾಲುಃ ಶ್ರೀ. JPA ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ಕಲಿತಿರುತ್ತೇನೆ. PUC ಮಾಡಿ ಅರ್ಧಕ್ಕೆ ಬಿಟ್ಟಿರುತ್ತೇನೆ. ನನ್ನ ಅಣ್ಣ ಸುಭಾಷ ದ್ವಿತೀಯ PUC ಪಾಸಾಗಿರುತ್ತಾನೆ. ನನ್ನ ಅಣ್ಣ ಬಸವರಾಜ 7ನೇ ತರಗತಿ ನಪಾಸ ಆಗಿರುತ್ತಾನೆ. ಮೃತ ಪ್ರತಿವಾದಿ ನಾಗೇಂದ್ರಪ್ಪ MA ಮಾಡಿರುತ್ತಾನೆ ಎಂದರೆ ಸರಿ. ಗುಂಡಪ್ಪನ 6 ಜನ ಮಕ್ಕಳು ಅವಿದ್ಯಾವಂತರು ಅಲ್ಲ ಎಂದರೆ ಸರಿ. ಎಲ್ಲರೂ ಶಾಲೆಯನ್ನು ಕಲಿತಿರುತ್ತಾರೆ ಎಂದರೆ ಸರಿ. ಎಲ್ಲರೂ ಸಹಿಗಳನ್ನು ಮಾಡುತ್ತಾರೆ ಎಂದರೆ ಸರಿ.

ನನ್ನ ತಂದೆ 02-03-2003 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಳ್ಳುವುದಕ್ಕಿಂತ ಮುಂಚೆ ಆತನ ಎಲ್ಲಾ ಮಕ್ಕಳ ಮದುವೆ ಆಗಿತ್ತು ಎಂದರೆ ಸರಿ. ಸಾಮಾನ್ಯವಾಗಿ ಮದುವೆಯಾದ ನಂತರ ಮಕ್ಕಳು ಬೇರೆ ಬೇರೆಯಾಗಿ ವಾಸ ಮಾಡುತ್ತಾರೆ ಎಂದರೆ ಸರಿಯಲ್ಲ. ನಾವೆಲ್ಲರೂ ಕೂಡಿ ಇದ್ದೆವು. ಗುಂಡಪ್ಪನ 6 ಜನ ಮಕ್ಕಳು ಮತ್ತು ಸೊಸೆಯಂದಿರು ರಾಮತೀರ್ಥ ಮತ್ತು ಹಲಚೇರಾ ಗ್ರಾಮದಲ್ಲಿ ಇರುತ್ತಿದ್ದೆವು. ಎರಡೂ ಗ್ರಾಮದಲ್ಲಿ ಇರುತ್ತಾರೆಂದು ತೋರಿಸಲು ಚುನಾವಣಾ ಗುರುತಿನ ಚೀಟಿ, ರೇಷನ ಕಾರ್ಡನ್ನು ಹಾಜರು ಪಡಿಸಿದ್ದೀರಾ ಎಂದರೆ ಆಗ ರೇಷನ ಕಾರ್ಡ ಇರುತ್ತಿರಲಿಲ್ಲ, ರಾಮತೀರ್ಥದಲ್ಲಿ ವಾಸ ಮಾಡುವವರು ಅಲ್ಲಿಯೇ ಮತದಾನ ಮಾಡುತ್ತಿದ್ದರು, ಹಲಚೇರಾ ಗ್ರಾಮದಲ್ಲಿರುವವರು ಅದೇ ಗ್ರಾಮದಲ್ಲಿ ಮತದಾನ ಮಾಡುತ್ತಿದ್ದರು. ಆ ಬಗ್ಗೆ ಮತದಾನ ಗುರುತಿನ ಚೀಟಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ.

ನಮ್ಮ ತಂದೆ ತೀರಿಕೊಂಡ ನಂತರ ಮನೆಯ ಹಿರಿತನವನ್ನು ನನ್ನ ಅಣ್ಣ ಸುಭಾಷ ನೋಡಿಕೊಳ್ಳುತ್ತಿದ್ದ. ನನ್ನ ಅಣ್ಣ ಸುಭಾಷಕ್ಕಿಂತ ಇನ್ನುಳಿದ ಅಣ್ಣ ತಮ್ಮಂದಿರು ಹಿರಿತನ ಮಾಡಲು ಒಳ್ಳೆಯ ಬುದ್ದಿವಂತಿಕೆಯನ್ನು ಹೊಂದಿದ್ದರು ಎಂದರೆ ಸರಿಯಲ್ಲ. ಆತನು ಹಿರಿತನ ಮಾಡುತ್ತಿದ್ದ ಎಂದು ತೋರಿಸಲು ಕಾಗದ ಪತ್ರ ಇರುವುದಿಲ್ಲ. ರೂಢಿಗತ ಹಿರಿತನ ಮಾಡುತ್ತಿದ್ದ. ರಾಮತೀರ್ಥ ಮತ್ತು ಹಲಚೇರಾದಲ್ಲಿ ನನ್ನ ತಂದೆ ಆಸ್ತಿಗಳನ್ನು ಹೊಂದಿ ಒಳ್ಳೆಯ ಆರ್ಥಿಕ ಸ್ಥಿತಿವಂತ ಇದ್ದ ಎಂದರೆ ಸರಿಯಲ್ಲ.

ಸುಭಾಶನ ಹೆಂಡತಿಯ ಹೆಸರು ರುಕ್ಮಿಣಿಬಾಯಿ ಎಂದರೆ ಸರಿ. ರುಕ್ಮಿಣಿಬಾಯಿಯ ತಂದೆ ಹೆಸರು ಗುಂಡಪ್ಪ ಎಂದರೆ ಸರಿ. ರುಕ್ಮಿಣಿಬಾಯಿಯ ತಂದೆ ಗುಂಡಪ್ಪನ ಹೆಸರಿನಲ್ಲಿ 150-200 ಎಕರೆ ಜಮೀನು

ಇತ್ತು ಎಂದರೆ ನನಗೆ ಗೊತ್ತಿಲ್ಲ. ಅವರ ಮನೆತನದ ಬಗ್ಗೆ ಮಾಹಿತಿ ಇಲ್ಲ. ಅವರು ಆರ್ಥಿಕ ಸ್ಥಿತಿವಂತರು ಇದ್ದರು ಎಂದರೆ ಅವರ ಮನೆತನದ ಬಗ್ಗೆ ಏನೂ ಮಾಹಿತಿ ಇರುವುದಿಲ್ಲ.

ನನ್ನ ಅಣ್ಣ ಸುಭಾಶನಿಗಿಂತ ಮೊದಲು ನನ್ನ ಅಕ್ಕ ಸುಬ್ಬಮ್ಮರವರ ಮದುವೆಯಾಗಿತ್ತು ಎಂದರೆ ಸರಿ. ಆಕೆಯ ಮದುವೆಯಾದ ನಂತರ ಗಂಡನ ಮನೆಯಲ್ಲಿ ವಾಸ ಇದ್ದಳು ಎಂದರೆ ಇಲ್ಲಿಯೂ ಇರುತ್ತಿದ್ದಳು ಮತ್ತು ಅಲ್ಲಿಯೂ ಇರುತ್ತಿದ್ದಳು. ಅವಳು ನಮ್ಮ ಜಂಟಿ ಕುಟುಂಬದಲ್ಲಿ ವಾಸ ಇರುತ್ತಿದ್ದಳು.

ನಾವು 6 ಜನ ಅಣ್ಣ ತಮ್ಮಂದಿರು ಕಾನೂನು ಬದ್ದವಾಗಿ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡಿದ್ದೆವು ಎಂದರೆ ಉಪಜೀವನಕ್ಕಾಗಿ ಪಾಲು ವಿಭಾಗ ಮಾಡಿಕೊಂಡಿದ್ದೆವು. ಸುಮಾರು 10-11 ವರ್ಷಗಳ ಹಿಂದೆ ಉಪಜೀವನಕ್ಕಾಗಿ ಪಾಲು ವಿಭಾಗ ಮಾಡಿಕೊಂಡಿದ್ದೆವು. ಈ ದಾವೆಯನ್ನು ದಾಖಲಿಸಿದ ನಂತರ ಉಪಜೀವನಕ್ಕಾಗಿ ಪಾಲು ವಿಭಾಗ ಮಾಡಿಕೊಂಡಿದ್ದೆವು. ನಾನು ನನ್ನ ಉಪಜೀವನಕ್ಕಾಗಿ ಸ.ನಂಬರ 227 ರಲ್ಲಿ ಸ್ವಲ್ಪ ಕ್ಷೇತ್ರ ಮಾಡುತ್ತಿದ್ದೆ. ಬಸವರಾಜನಿಗೆ ರಾಮತೀರ್ಥ ಗ್ರಾಮದಲ್ಲಿರುವ ಆಸ್ತಿಯ ಸ.ನಂಬರ 33 ನ್ನು ಉಪ ಜೀವನಕ್ಕಾಗಿ ಉಳುಮೆ ಮಾಡುತ್ತಿದ್ದ. ಅದರ ಕ್ಷೇತ್ರ 10 ಎಕರೆ 35 ಗುಂಟೆ. ಶಾಂತಪ್ಪ ನಮ್ಮ ತಂದೆ ಹೆಸರಿನಲ್ಲಿದ್ದ ಆಸ್ತಿಯನ್ನು ಉಪ ಜೀವನಕ್ಕಾಗಿ ಉಳುಮೆ ಮಾಡುತ್ತಿದ್ದ. ನಾಗೇಂದ್ರಪ್ಪ ಸ.ನಂಬರ 12 ರಲ್ಲಿ ಉಪ ಜೀವನಕ್ಕಾಗಿ ಉಳುಮೆ ಮಾಡುತ್ತಿದ್ದ. ಸ.ನಂಬರ 27 ರಲ್ಲಿ 13 ಎಕರೆ 5 ಗುಂಟೆಯಲ್ಲಿ ನಾನು ಮತ್ತು ಚಂದ್ರಕಾಂತ ಸಮಭಾಗವಾಗಿ ಉಪ ಜೀವನಕ್ಕಾಗಿ ಉಳುಮೆ ಮಾಡುತ್ತಿದ್ದೆವು. ಸುಭಾಶನು ಸ.ನಂಬರ 119 ಕ್ಷೇತ್ರ 11 ಎಕರೆ ಮತ್ತು ಸ.ನಂಬರ 12/2 ರಲ್ಲಿ ಕ್ಷೇತ್ರ 4 ಎಕರೆ ಉಪ ಜೀವನಕ್ಕಾಗಿ ಉಳುಮೆ ಮಾಡುತ್ತಿದ್ದ. ಸ.ನಂಬರ 186 ಕ್ಷೇತ್ರ 17-18 ಎಕರೆ ಬೀಳು ಬಿದ್ದಿರುತ್ತದೆ. ಸ.ನಂಬರ 94 ರುಕ್ಮಿಣಿಬಾಯಿ ಉಪ ಜೀವನಕ್ಕಾಗಿ ನೀಡಿರುತ್ತೇವೆ.

ನಾವು ಎಲ್ಲಾ ಅಣ್ಣ ತಮ್ಮಂದಿರು ಅನೋನ್ಯವಾಗಿ ಮಾತನಾಡುತ್ತಿದ್ದೆವು. ಈ ದಾವೆಯನ್ನು ದಾಖಲಿಸಿದ ನಂತರ ನಮ್ಮಲ್ಲಿ ಒಡಕು ಉಂಟಾಗಿರುತ್ತದೆ. ನನ್ನ ಸ್ವಂತ ಒಕ್ಕಲುತನ ಇರಲಿಲ್ಲ. ಎಲ್ಲಾ ಜಂಟಿಯಾಗಿ ಇತ್ತು. ನಾವು ಪ್ರತ್ಯೇಕವಾಗಿ ಮನೆಯನ್ನು ಹೊಂದಿರುವುದಿಲ್ಲ. ಈ ಕೇಸು ದಾಖಲಿಸಿದ ನಂತರ ಬೇರೆ ಬೇರೆ ಮನೆಯಲ್ಲಿ ಪ್ರತ್ಯೇಕವಾಗಿ ವಾಸ ಮಾಡುತ್ತಾ ಇರುತ್ತೇವೆ.

2012 ರಲ್ಲಿ ನಾನು, ನನ್ನ ತಮ್ಮನಾದ ಚಂದ್ರಕಾಂತ ಮತ್ತು ಆತನ ಹೆಂಡತಿಯ ಮೇಲೆ ನಿ.ಡಿ-43 ರಂತೆ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದೆ ಎಂದರೆ ಸರಿ. ಆ ದೂರಿನಲ್ಲಿ ನನ್ನ ಪಾಲಿಗೆ ಬಂದ ಜಾಗದಲ್ಲಿ ನಾನು ಎತ್ತುಗಳನ್ನು ಕಟ್ಟುವಾಗ ನನಗೆ ತಕರಾರು ಉಂಟು ಮಾಡಿರುತ್ತಾರೆ ಎಂದು ಪ್ರಕರಣ ದಾಖಲಿಸಿದ್ದೆ ಎಂದರೆ ನಾವು ಬೇರೆಯಾಗಿರುವುದಿಲ್ಲ, ಆದರೆ ಎತ್ತು ಕಟ್ಟಲು ಮಾತ್ರ ಜಗಳವಾಡಿದ್ದೆವು. ನಿ.ಡಿ-43 ರಂತೆ ನೀಡಿದ ದೂರಿನಲ್ಲಿ ಬರೆದ ವಿಷಯಗಳು ಸರಿಯಾಗಿರುತ್ತವೆ. ಅದೇ ರೀತಿ 2012 ರಲ್ಲಿ ನಿ.ಡಿ-41 ರಂತೆ ಚಂದ್ರಕಾಂತ ನನ್ನ ವಿರುದ್ದ ಪ್ರತಿ ದೂರು ನೀಡಿದ್ದ ಎಂದರೆ ಸರಿ.

**ಒ.ಎಸ್.ನಂ. 26/2014**
**DW-7**

ನಾಗೇಂದ್ರಪ್ಪ ನನ್ನ, ಸುಭಾಶಚಂದ್ರ ಮತ್ತು ಚಂದ್ರಕಾಂತನ ವಿರುದ್ದ ನಿರ್ಬಂಧಕಾಜ್ಞೆ ದಾವೆಯನ್ನು ದಾಖಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯು ಸ.ನಂಬರ 12/3ರ ಕುರಿತು ಇತ್ತು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನಮಗೆ ನೋಟೀಸು ಜಾರಿ ಯಾಗಿರುವುದಿಲ್ಲ. ದಿನಾಂಕ 28-09-2015 ರಂದು ಆ ದಾವೆಯಲ್ಲಿ ಖುದ್ದಾಗಿ ಹಾಜರಾಗಿ ರೋಜನಾಮಗೆ ಸಹಿ ಮಾಡಿರುತ್ತೆವೆ ಎಂದರೆ ಸರಿಯಲ್ಲ. ವಕೀಲರು ಗಲತ್ ಮಾಡಿರುತ್ತಾರೆ. ಆ ದಾವೆಯಲ್ಲಿ ಉಭಯ ಪಕ್ಷಗಾರರು ಹಾಜರಾಗಿ ಆ ದಾವೆಯು ವಜಾ ಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯ ಸಂಗತಿ ಗೊತ್ತಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2023 ರಲ್ಲಿ ಅಸಲು ದಾವಾ ಸಂಖ್ಯೆ 46/2023 ರಂತೆ ಸ.ನಂಬರ 9/4 ರ ಕುರಿತು ಮಾಲೀಕತ್ವ ಮತ್ತು ಶಾಶ್ವತ ನಿರ್ಭಂದಕಾಜ್ಞೆ ದಾವೆಯನ್ನು ನಾನು ದಾಖಲಿಸಿದ್ದೆ ಎಂದರೆ ಸರಿಯಲ್ಲ. ಮಲ್ಲಿಕಾರ್ಜುನ ದಾಖಲಿಸಿದ್ದ. ಮಲ್ಲಿಕಾರ್ಜುನ ಮತ್ತು ಅಗ್ನಿಹೋತ್ರಿ ವಕೀಲರು ನನ್ನ ಸಹಿಯನ್ನು ಪಡೆದು ದಾಖಲಿಸಿರುತ್ತಾರೆ, ಅದನ್ನು ನಂತರ ನಾನು ವಾಪಾಸು ಪಡೆದಿರುತ್ತೇನೆ. ಆ ಬಗ್ಗೆ ನನ್ನ ಶಪಥ ಪತ್ರದಲ್ಲಾಗಲಿ ಅಥವಾ ಪ್ರತಿವಾದ ಪತ್ರದಲ್ಲಾಗಲಿ ನಮೂದು ಮಾಡಿಲ್ಲ ಎಂದರೆ ಸರಿ. ಆ ದಾವೆಯನ್ನು ನಾನೇ ದಾಖಲಿಸಿದ್ದರೂ ವಿನಾ ಕಾರಣ ವಕೀಲರ ಮೇಲೆ ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ಕಲ್ಪಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.